ತುಡಿತ–ಮಿಡಿತಗಳಿಲ್ಲದೆ ಸುಖ ಬೇಕೆಂದಾಗ ಸೂರೆಗೊಂಡು ಆರಾಮಾಗಿ ಇದ್ದೇವೆ! ಸೂರ್ಯಮಣಿ ಮತ್ತು ಪರಿಣತಿಯ ಸ್ನೇಹ ಎಷ್ಟು ಆಳವಾಗಿತ್ತು ಎಂದರೆ, ತನ್ನ ಗೆಳತಿಯ ಈ ಹೊಸ ಸಂಬಂಧದ ವಿವರಗಳನ್ನು ಕೇಳಿದ ಮೇಲೂ ಇವಳಿಗೆ ಒಂದಿಷ್ಟೂ ಅಸಹನೆಯಾಗಲಿ ಅಸಹ್ಯವಾಗಲಿ ಅನ್ನಿಸಿರಲಿಲ್ಲ!

ಸೂರ್ಯಮಣಿ ಮನೆಯ ಒಳಗೆ ಬಂದವಳೇ ಮಾತು ಶುರು ಮಾಡಿದಳು:

'ಪರಿ, ಇವನ ಹೆಸರು – ದೀಪಕ್ ಅಂತ, ನಾನು ಹಗಲು ಬೆಳಗುವ ಸೂರ್ಯಮಣಿಯಾದರೆ, ಇವನು ರಾತ್ರಿ ಬೆಳಗುವ ನನ್ನ ದೀಪ!'

ಅವರಿಬ್ಬರೂ ಅದೇನೋ ಗಡಿಬಿಡಿಯಲ್ಲಿ ಇದ್ದಂತೆ ಇತ್ತು. ಬಂದ ಸ್ವಲ್ಪ ಹೊತ್ತಿಗೆ ಹೊರಟು ಹೋಗಿದ್ದರು. ಆದರೆ, ಅವಳು ಇರುವಷ್ಟೂ ಹೊತ್ತು ಪರಿಣತಿ ಮಾತ್ರ ಚಡಪಡಿಕೆಯಲ್ಲಿದ್ದಳು. ತನ್ನ ಮಗಳು ಶಾಲೆಯಿಂದ ಬರುವುದು ತಡವಾಗಲಿ ದೇವರೇ ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದಳು! ಅವಳ ಮೊರೆ ದೇವರಿಗೆ ತಲುಪಿತ್ತೋ ಏನೊ, ಸೂರ್ಯಮಣಿ ಮತ್ತು ದೀಪಕ್ ಅವರನ್ನು ಕಳುಹಿಸಿ, ಇನ್ನೂ ಗೇಟಿನ ಹತ್ತಿರವೇ ನಿಂತಾಗ ಮಗಳ ಸ್ಕೂಲ್ ಬಸ್ಸು ಬಂದು ಮನೆಯ ಮುಂದೆಯೇ ನಿಂತಿತು! ಅವಳಿಗೆ ಅರಿವಿಲ್ಲದಂತೆ ನಿಟ್ಟುಸಿರೊಂದು ಹೊರಗೆ ಬಂತು! ಬೆವರಿ ನಾರುತ್ತಿದ್ದ ಮಗಳನ್ನು ಎಂದಿಗಿಂತಲೂ ಬಿಗಿಯಾಗಿ ಅಪ್ಪಿಕೊಂಡು ನೆತ್ತಿಯ ಗಂಧವನ್ನು ಆಘ್ರಾಣಿಸಿ ಸಟಸಟನೆ ಒಳಗೆ ಕರೆದುಕೊಂಡು ಬಂದಳು.

ತನ್ನ ಮದುವೆಯ ಬಗ್ಗೆ ಮಾತನಾಡಲು ಶ್ರೀಧರಮೂರ್ತಿಗಳನ್ನು ಬಿಟ್ಟರೆ ಅವಳ ಮನಸ್ಸಿನಲ್ಲಿ ಉಳಿದಿದ್ದ ಏಕೈಕ ಹಿತಚಿಂತಕಳೆಂದರೆ ಇದೇ ಸೂರ್ಯಮಣಿ! ಮರುದಿನವೇ, ಒಂದು ಕ್ಷಣವೂ ಅನುಮಾನಿಸದೇ ಅವಳಿಗೆ ಫೋನ್ ಮಾಡಿಯೇಬಿಟ್ಟಳು. ಎಂದಿನಂತೆ, ಅವಳು ಸ್ಪಷ್ಟವಾಗಿ, ಅಡ್ಡ ಗೋಡೆಯ ಮೇಲೆ ದೀಪವಿಡದೆ ಇವಳ ಫೋನಿಗಾಗಿ ಕಾದು, ಉತ್ತರವನ್ನು ಸಿದ್ಧಮಾಡಿಟ್ಟುಕೊಂಡಿದ್ದಳೋ ಎನ್ನುವ ಹಾಗೆ ಹೇಳಿದಳು:

"ನೋಡು ಪರಿ, ಇಂತಹ ವಿಚಾರಗಳಲ್ಲಿ, ನಾನಾಗಲಿ, ನಿನ್ನ ಅಕ್ಕನಾಗಲಿ ಅಷ್ಟೇ ಯಾಕೆ ನಿನ್ನ ಮೂರ್ತಿ ಸರ್ ಆಗಲಿ ಸೂಕ್ತ ಸಲಹೆ ಕೊಡಲು ಸಾಧ್ಯವೇ ಇಲ್ಲ. ನೀನು ನಿನ್ನ ಒಳದನಿಯನ್ನಷ್ಟೇ ಕೇಳು. ನಿನ್ನನ್ನು ನಗಿಸುವುದು ಅಳಿಸುವುದು ಎಲ್ಲಾ ಅದೇ! ನಿನ್ನ ಎಲ್ಲ ಜವಾಬ್ದಾರಿಯನ್ನು ಅದಕ್ಕೆ ಬಿಟ್ಟು ನಿಶ್ಚಿಂತೆಯಿಂದ ಇರು ಅಷ್ಟೆ."

★★★

ವಿಕ್ರಮನೊಂದಿಗೆ ಮೂರು ವರ್ಷಗಳ ವೈವಾಹಿಕ ಸಂಬಂಧ ಮುಗಿದು, ಅಧಿಕೃತ ದಾಖಲೆ ಪತ್ರಗಳು ಕೈಗೆ ಸಿಕ್ಕಿದ ಕ್ಷಣದಲ್ಲಿಯೇ ಪರಿಣತಿ ಅಂದುಕೊಂಡುಬಿಟ್ಟಿದ್ದಳು – ಇನ್ನು ಯಾವತ್ತೂ ತಾನು ಮತ್ತು ಸಮ್ಮತಿ ಇಬ್ಬರೇ! ಆಜೀವ ಪರ್ಯಂತ ಸಂಗಾತಿಗಳು! ತಾನು ಯಾರ ಹೆಗಲಿಗೂ ಒರಗಕೂಡದು. ತನ್ನ ಮುಂದಿನ ಗುರಿ – ಸಮ್ಮತಿಗೆ ಅತ್ಯುತ್ತಮ ಸಂಸ್ಕಾರ ಮತ್ತು ಶಿಕ್ಷಣ, ಅಷ್ಟೇ! ಮದುವೆ ಎಂಬ ಜೂಜಾಟದಲ್ಲಿ ಅವಳು ಏನೆಲ್ಲವನ್ನು ಕಳೆದುಕೊಂಡರೂ ತನ್ನ ಮುದ್ದು ಮಗಳನ್ನು ಮಾತ್ರ ಗೆದ್ದುಕೊಂಡಿದ್ದಳು! ಆಮೇಲೆ ಎಷ್ಟೋ ವರ್ಷ ಅವಳಷ್ಟಕ್ಕೆ ಅವಳು ಸಾವಿರ ಬಾರಿ ಹೇಳಿಕೊಂಡಿದ್ದಾಳೆ – ದೇವರೇ, ಮತ್ತೆ ಅದೇ ಆಟಕ್ಕೆ ನನ್ನನ್ನು ಎಳೆಸಬೇಡ; ನನ್ನ ಮಗಳನ್ನು ಪಣಕ್ಕಿಟ್ಟು ನಾನೊಮ್ಮೆ ಗೆದ್ದರೆ, ಆ ಗೆಲುವೊಂದು ಗೆಲುವೇ!?

ಮಗಳಿಗೆ ಎಂದೂ ತಂದೆಯ ಕೊರತೆ ಕಾಣದ ಹಾಗೆ ಅವಳನ್ನು ಬೆಳೆಸಿ, ಓದಿಸುತ್ತಿದ್ದಳು. ಅವಳೂ ಎಂದೂ ಅಮ್ಮ ನಿಟ್ಟುಸಿರು ಬಿಡದ ಹಾಗೆ ತನ್ನ ಓದಿನಲ್ಲಿ, ನಡೆ ನುಡಿಗಳಲ್ಲಿ ಜಾಣೆ. ಅಪ್ಪನ ಬಗ್ಗೆ ಅವಳಿಗೆ ಗೊತ್ತಿರುವುದು ಇಷ್ಟೇ – ಅವನು ಒಳ್ಳೆಯವನೂ ಅಲ್ಲ, ಕೆಟ್ಟವನೂ ಅಲ್ಲ. ಅವನಿಗೆ, ಅಮ್ಮನೊಂದಿಗೆ ಸಂಸಾರದ ಆಟ ಸಾಕೆನಿಸಿತು – ಹೊರಟುಹೋದ, ಅಷ್ಟೇ. ಇನ್ನು, ತನ್ನನ್ನು ಅಮ್ಮ